(೩) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಂ. ಎಲ್. ಮುನಿಕೃಷ್ಣಪ್ಪನವರ್.—ಮಾನ್ಯ ಅಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಯಾರು ? ಯಾರು ತಪ್ಪು ಮಾಡಿದ್ದಾರೆಂಬುದನ್ನು ಮಾನ್ಯ ಮಂತ್ರಿಗಳವರು ಹೇಳಲಿಲ್ಲ. ಅವರ ಬಗ್ಗೆ ಉಗ್ರವಾದ ಕ್ರಮವನ್ನು ತೆಗೆದುಕೊಂಡು ಅಲ್ಲಿ ಉಂಟಾಗಿರುವಂತಹ ಅಡಚಣೆಯನ್ನು ತೀವ್ರವಾಗಿ ಪರಿಹರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಇದಕ್ಕೆ ಯಾರು ಕಾರಣರು ಆ ತಪ್ಪಿತಸ್ಥರು ಯಾರು ಎಂದು ಕಂಡು ಹಿಡಿಯಿರಿ ಎಂದು ಹೇಳಿದ್ದೇವೆ. ವರದಿ ಬಂದ ತಕ್ಷಣವೇ ತಪಿತಸ್ಥರ ಮೇಲೆ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಕೋಲಾರ ಮಾಲೂರು ಮತ್ತು ಬಂಗಾರಂ ಪೇಟೆ ತಾಲ್ಲೂಕುಗಳಲ್ಲಿರುವ ಅರಣ್ಯ ಭೂಮಿ

೪೬೩(೧೩೧೫) ಶ್ರೀ ಎ. ನಾಗರಾಜು (ಮಾಲೂರು).—ಮಾನ್ಯ ರಾಜ್ಯ ಅರಣ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕೋಲಾರ ಮಾಲೂರು ಮತ್ತು ಬಂಗಾರು ಪೇಟೆ ತಾಲ್ಲೂಕಿನಲ್ಲಿರುವ ಅರಣ್ಯ ಭೂಮಿಯ ವಿಸ್ತೀರ್ಣ ಎಷ್ಟು ? (ತಾಲ್ಲೂಕುವಾರು ಮಾಹಿತಿ ಒದಗಿಸುವುದು)

ಆ) ವ್ಯವಸ್ಥಿತ ವ್ಯವಸಾಯಕ್ಕೆ ಅರಣ್ಯ ಭೂಮಿಯನ್ನು ಯಾವುದಾದರೂ ಮಂಜೂರು ಮಾಡಲಾಗಿದೆಯೆ ? ಹಾಗಿದ್ದಲ್ಲಿ ಅವರ ವಿಸ್ತೀರ್ಣ ಎಷ್ಟು ? (ತಾಲ್ಲೂಕುವಾರು ಮಾಹಿತಿ ಒದಗಿಸುವುದು)

ಇ) ಮಂಜೂರುದಾರರ ಹೆಸರು ಮತ್ತು ವಿಳಾಸ?

ಈ) ಮಂಜೂರುದಾರರು ಕೈಗೊಂಡ ವ್ಯವಸ್ಥಿತ ವ್ಯವಸಾಯಗಳ ತಪಶೀಲು ಒದಗಿಸುವುದು?

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

ತಾಲ್ಲೂಕಿನ ಹೆಸರು	ಅರಣ್ಯ ಭೂಮಿಯ ವಿಸ್ತೀರ್ಣ	
೧) ಕೋಲಾರ	೨೩೪೪	ಹೆಕ್ಟೇರು
೨) ಮಾಲೂರು	೧೪೦೬	...
೩) ಬಂಗಾರುಪೇಟೆ	೧೦೯೫೪	...
ಒಟ್ಟು ...	೧೪೭೦೪	ಹೆಕ್ಟೇರುಗಳು

ಆ) ಇಲ್ಲಾ.

ಇ) ಉದ್ಭವಿಸುವುದಿಲ್ಲ.

ಶ್ರೀ ಎ. ನಾಗರಾಜ್.—ಮಾನ್ಯ ಅಧ್ಯಕ್ಷರೇ, ಕೋಲಾರ, ಮಾಲೂರು ಮತ್ತು ಬಂಗಾರುಪೇಟೆ ಈ ಮೂರು ತಾಲ್ಲೂಕುಗಳಲ್ಲಿ ಸಾವಿರದ ಹತ್ತಿರ ಟೈಲ್ ಫ್ಯಾಕ್ಟರಿಗಳವರು ಮುಚ್ಚಬೇಕಾದಂಥ ಪರಿಸ್ಥಿತಿ ಬಂದಿದೆ. ಇದರಿಂದ ಸಾವಿರಾರು ಜನ ಡೈರೆಕ್ಟಾಗಿ ಮತ್ತು ಇನ್‌ಡೈರೆಕ್ಟಾಗಿ ತೊಂದರೆಗೆ ಒಳಗಾಗುತ್ತಿದ್ದಾರೆ. ಆ ಫ್ಯಾಕ್ಟರಿಗಳವರಿಗೆ ತಾವು ಸೌದೆಯನ್ನು ಒದಗಿಸುವ ಬಗ್ಗೆ ವಿಚಾರ ಮಾಡುತ್ತೀರಾ?

ಶ್ರೀ ಬಿ. ಎ. ಜೀವಿಜಯ.—ಅಧ್ಯಕ್ಷರೇ, ಇದು ಮೂಲ ಪ್ರಶ್ನೆಗೆ ಸಂಬಂಧವಿಲ್ಲ, ಆದರೂ ಕೂಡ ಇವತ್ತಿನ ದಿವಸ ನನ್ನ ಇಲಾಖೆಯ ಬೇಡಿಕೆ ಮೇಲಿನ ಚರ್ಚೆ ಇದೆ, ಮಾನ್ಯ ಸದಸ್ಯರು ಅದರ ಮೇಲೆ ಮಾತನಾಡಿದರೆ ನಾನು ಉತ್ತರ ಕೊಡುತ್ತೇನೆ.

General Hostel at Nagasamurdra Molkalmuru taluk